**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಬಂಗಾರಪೇಟೆ**

## O S ಃ 188–2006 CW–1

**ಸಾಕ್ಷಿಯನ್ನು ದಿಃ31.03.2021 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| **ಹೆಸರುಃ** | ಡಿ.ಎಸ್. ಸಂತೋಷ್ |
| **ತಂದೆ ಹೆಸರುಃ** | ಸದಾಶಿವಪ್ಪ |
| **ವಯಸ್ಸುಃ** | 44 |
| **ವೃತ್ತಿಃ** | ಸರ್ವೇಯರ್ |
| **ವಾಸ ಸ್ಥಳಃ** | ನಾಗಮಂಗಲ, ಮಂಡ್ಯ ಜಿಲ್ಲೆ |

**ಮುಖ್ಯವಿಚಾರಣೆಃ**

- ನನಗೆ ಈ ಪ್ರಕರಣದಲ್ಲಿ ದಾವಾ ಸ್ವತ್ತನ್ನು ಅಳತೆ ಮಾಡಿ, ವರಧಿ ಸಲ್ಲಿಸಲು ಕಮೀಷನರ್ ಆಗಿ ನೇಮಕ ಮಾಡಿದ್ದು ಅದರಂತೆ ನ್ಯಾಯಾಲಯದಿಂದ ನನಗೆ ಕಮೀಷನರ್ ವಾರೆಂಟ್ ಬಂದಿರುತ್ತದೆ. ಸಾಕ್ಷಿಯು ಸದರಿ ವಾರೆಂಟ್ ನ್ನು ನೊಡೀ ಗುರುತಿಸಿದ್ದು ಅದನು ನಿಸಿ–1 ಎಂದು ಗುರುತಿಸಲಾಯಿತು.
- ವಾದಿ ಪರ ವಕೀಲರು ತಮ್ಮ ಸೂಚನಾವಳಿಯನ್ನು ಸಲ್ಲಿಸಿರುತ್ತಾರೆ. ಅದನ್ನು ನಿಸಿ–2 ಎಂದು ಗುರುತಿಸಲಾಯಿತು.
- ನಾನು ಸರ್ವೆ ಮಾಡುವ ಮುನ್ನಾ ಇಬ್ಬರೂ ಪಕ್ಷಗಾರರಿಗೆ ನೋಟಿಸ್‌ನ್ನು ಜಾರಿಗೊಳಿಸಿರುತ್ತೇನೆ. ಸದರಿ ನೋಟಿಸ್ ನಿಸಿ–3 ಎಂದು ಗುರುತಿಸಲಾಯಿತು.
- ಪಕ್ಷಗಾರರ ಹಾಜರಿಯಲ್ಲಿ ನಾನು ದಾವಾ ಸ್ವತ್ತನ್ನು ಅಳತೆ ಮಾಡಿ, ಸ್ಥಳದಲ್ಲಿ ಮಹಜರ್ ಮತ್ತು ಸ್ಕೆಚ್‌ನ್ನು ತಯಾರಿಸಿರುತ್ತೇನೆ. ಮಹಜರ್ ನ್ನು ನಿಸಿ–4 ಎಂದು, ಸ್ಕೆಚ್‌ನ್ನು ನಿಸಿ–5 ಎಂದು ಗುರುತಿಸಲಾಯಿತು.
- ವಾದಿ ಪರ ವಕೀಲರು ನೀಡಿದ ಸೂಚನಾವಳಿಗಳಿಗೆ ಉತ್ತರವನ್ನು ನೀಡಿರುತ್ತೇನೆ. ಸದರಿ ಉತ್ತರದ ಪ್ರತಿಯನ್ನು ನಿಸಿ–6 ಎಂದು ಗುರುತಿಸಲಾಯಿತು.

- ಸರ್ವೆ ಮುಗಿದ ನಂತರ ನಾನು ನ್ಯಾಯಾಲಯಕ್ಕೆ ನನ್ನ ವರಧಿಯನ್ನು ಸಲ್ಲಿಸಿರುತ್ತೇನೆ. ಅದನ್ನು ನಿಸಿ–7 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಜಿ ವಕೀಲರಿಂದಃ**

ನಾನು ನ್ಯಾಯಾಲಯದಿಂದ ಯಾವುದೇ ದಾಖಲಾತಿಯನ್ನು ಪಡೆದುಕೊಂಡಿರುವುದಿಲ್ಲ. ಸರ್ವೆಯನ್ನು ದಾಖಲಾತಿ ಮತ್ತು ಸೂಚನಾವಳಿಯ ಆಧಾರದ ಮೇಲೆ ಮಾಡಬೇಕಾಗುತ್ತದೆ ಎಂದರೆ ಸರಿ. ನಿಸಿ–2 ರ ಅನ್ವಯ ದಾವಾ ಸ್ವತ್ತಿನ ಶೆಡ್ಯೂಲ್ ನ ಆಧಾರದ ಮೇಲೆ ಅಳತೆ ಕಾರ್ಯ ಮಾಡಬೇಕು ಎಂದರೆ ಸರಿ. ವಾದಿ ಪರ ಸೂಚನಾವಳಿಯಂತೆ ಬಿ ಮತ್ತು ಸಿ ಸ್ವತ್ತುಗಳನ್ನು ನಾನು ಅಳತೆ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸ್ಥಳದಲ್ಲಿ ಪಕ್ಷಗಾರರು ಬಿ ಮತ್ತು ಸಿ ಶೆಡ್ಯೂಲ್ ಸ್ವತ್ತುಗಳು ನಮಗೆ ಸಂಬಂದಪಟ್ಟಿಲ್ಲ ಎಂದು ತಿಳಿಸಿದ ಮೇರೆಗೆ ಅವುಗಳನ್ನು ಅಳತೆ ಮಾಡಿಲ್ಲ ಎಂದು ನುಡಿದಿರುತ್ತಾರೆ. ನ್ಯಾಯಾಲಯದಿಂದ ನಾನು ಸ್ಕೆಚ್ ಮತ್ತು ಕ್ರಯ ಪತ್ರವನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ನಾನು ಸರ್ವೆಯನ್ನು ವಾದಿಯ ಸೂಚನಾವಳಿಯ ಮೇರೆಗೆ ಮಾಡಿರುವುದಿಲ್ಲ ಎಂದರೆ ಸರಿ. ನಾನು ಪ್ರತಿವಾದಿಗಳ ಜೊತೆ ಶಾಮೀಲಾಗಿ ಸುಳ್ಳು ವರಧಿಯನ್ನು ತಯಾರಿಸಿ, ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎ ಎಂ ಎಸ್ ವಕೀಲರಿಂದ ಃ**

ನಾನು ನ್ಯಾಯಾಲಯದಿಂದ ಕ್ರಯ ಪತ್ರವನ್ನು ಪಡೆದುಕೊಂಡಿರುತ್ತೇನೆ. ಪಕ್ಷಗಾರರು ಸ್ಥಳದಲ್ಲಿ ಬಿ ಮತ್ತು ಸಿ ಶೆಡ್ಯೂಲ್ ಸ್ವತ್ತುಗಳನ್ನು ತೋರಿಸಿರುವುದಿಲ್ಲ ಎಂದರೆ ಸರಿ. ಸರ್ವೆ ಮಾಡುವ ಕಾಲಕ್ಕೆ ಪಕ್ಷಗಾರರು ಯಾವುದೇ ತಕರಾರನ್ನು ಮಾಡಿರುವುದಿಲ್ಲ. ಸ್ಥಳದಲ್ಲಿ ಯಾವುದೇ ಸೂಚನೆಗಳನ್ನು ನೀಡಿರುವುದಿಲ್ಲ. ನಾನು ಪಕ್ಷಗಾರರು ಮತ್ತು ನ್ಯಾಯಾಲಯದ ಸೂಚನೆ ಮೇರೆಗೆ ಸರ್ವೆ ಕಾರ್ಯವನ್ನು ಮಾಡಿರುತ್ತೇನೆ ಎಂದರೆ ಸರಿ.

**ಮರುವಿಚಾರಣೆಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**Sd/-**

**(ದೀಪು.ಬಿ.ಸಿ)**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,

ಬಂಗಾರಪೇಟೆ